**<u>ದಿನಾಂಕಃ 06-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಶ್ರೀ ಸಿ.ಹೆಚ್.ಜಿ 3 ನೇ ಪ್ರತಿವಾದಿ ಪರ ವಕೀಲರಿಂದಃ</u>**

**17.** ನಿಮ್ಮ ಮಗಳು ಬೆಳೆ ಸಾಲ ಬೇಕು ಅಂತಾ ಹೇಳಿ ಮೋಸದಿಂದ ನಿಮ್ಮ ಸಹಿ ತೆಗೆದುಕೊಂಡಿದ್ದನು ಯಾವಾಗ ಹೇಳಿರುತ್ತಾರೆ ಅಂದರೆ ಡಿಸೆಂಬರ 2019 ನೇ ಇಸ್ವಿಯಲ್ಲಿ ಹೇಳಿರುತ್ತಾರೆ. ಚನ್ನಬಸಪ್ಪ ಮತ್ತು ನಿಮ್ಮ ಮಗಳು ಬಹಳಷ್ಟು ಕಡೆ ಸಾಲ ಮಾಡಿರುತ್ತಾರೆ ಅಂದರೆ ಅದು ನನಗೆ ಗೊತ್ತಿಲ್ಲ. ಆ ರೀತಿ ಸಾಲ ಮಾಡಿದ್ದರಿಂದಲೇ ದಾವಾ ಶೆಡ್ಯೂಲ್-3 ನೇ ಆಸ್ತಿಯನ್ನು ಸಾಲ ತೀರಿಸುವ ಸಲುವಾಗಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಅವರು ಬಹಳಷ್ಟು ಸಾಲ ಮಾಡಿದ ವಿಚಾರ ತಮಗೆ ಗೊತ್ತಿರುತ್ತದೆ, ಆದರೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ನೀವು ನಿಮ್ಮ ಮಗಳು ಮತ್ತು ಚನ್ನಬಸಪ್ಪ ಖರೀದಿ ಕೊಡಬೇಕೆಂಬ ಉದ್ದೇಶದಿಂದಲೇ ನಿಮ್ಮ ಮಗಳು ಸಹಿ ಮಾಡಿರುತ್ತಾರೆ, ಮೋಸದಿಂದ ಸುಳ್ಳು ಹೇಳಿ ಖರೀದಿಗೆ ಕೊಟ್ಟಿರುತ್ತಾರೆ. ಖರೀದಿ ಪತ್ರ ಆಗುವುದಕ್ಕಿಂತ ಪೂರ್ವದಲ್ಲಿ 2014 ನೇ ಇಸ್ವಿಯಲ್ಲಿ ದಾವಾ ಶೆಡ್ಯೂಲ್-1 ನೇ ಆಸ್ತಿಯ ಬಗ್ಗೆ ಸಂಚಾರ ಪತ್ರ ಬರೆದುಕೊಟ್ಟಿರುತ್ತಾರೆ ಅಂದರೆ ಸುಳ್ಳು. ಆ ಸಂಚಗಾರ ಪತ್ರವನ್ನು ಹಾವೇರಿಯ ಸಬ್ ರಜಿಸ್ಟರ ಕಛೇರಿಯಲ್ಲಿ ನೋಂದ ಮಾಡಿರುತ್ತಾರೆ ಅಂದರೆ ಬೇರೆ ಯಾವುದೋ ಕಾರಣ ಹೇಳಿ ನೋಂದ ಮಾಡಿರುತ್ತಾರೆ ಅಂತಾ ಹೇಳುತ್ತಾರೆ. 3 ನೇ ಪ್ರತಿವಾದಿಯಿಂದ ನಿಮ್ಮ ಮಗಳು ರೂ. 25.00 ಲಕ್ಷಗಳಿಗೆ ಖರೀದಿಯಾಗಿದ್ದು, ಹಂತ ಹಂತವಾಗಿ ರೂ.12.50 ಲಕ್ಷಗಳನ್ನು ಪಡೆದಿರುತ್ತಾರೆ ಅಂದರೆ ಸುಳ್ಳು. ದಿನಾಂಕಃ 26-09-2019 ರಂದು ಖರೀದಿ ಪತ್ರದ ಪ್ರಕಾರ ನಿಮ್ಮ ಮಗಳು ರೂ. 12.50 ಲಕ್ಷಗಳನ್ನು ಕೃಷ್ಣಾ ಗ್ರಾಮೀಣ ಬ್ಯಾಂಕನಿಂದ ಪಡೆದುಕೊಂಡು ಬಂದಿರುತ್ತಾರೆ ಅಂದರೆ ಸುಳ್ಳು. ಖರೀದಿಯ ಮಾತುಕತೆ ಸಂದರ್ಭದಲ್ಲಿ ನಾನು ಇರುವುದಿಲ್ಲ. ಖರೀದಿ ಮಾಡಿದ

ವಿಚಾರ ನನಗೆ ದಿನಾಂಕಃ 04-01-2020 ರಂದು ಗೊತ್ತಾಗಿರುತ್ತದೆ. 3 ನೇ ಪ್ರತಿವಾದಿ ರವಿಯವರನ್ನು ನಾನು ಇದುವರೆಗೂ ನೋಡಿರುವುದಿಲ್ಲ. ಅಸಲರ್ಜಿಯಲ್ಲಿ ರವಿಯವರನ್ನು ಬೇಟಿಯಾದ ಬಗ್ಗೆ ಬರೆಸಿರುವುದಿಲ್ಲ. ನಮ್ಮ ಮೇಲೆ ಧೋರಣೆ ಬಂದಿದ್ದು ಆಗ ಬರೆಸಿರುತ್ತೇನೆ. ಇಲ್ಲಿ ದಾವೆಯನ್ನು ಸಲ್ಲಿಸಿದ್ದು ಬೇರೆ ಕಡೆ ತಕರಾರು ಮಾಡಿರುವುದಿಲ್ಲ. ಕೋರ್ಟ ಫೀಯನ್ನು ಎಷ್ಟು ತುಂಬಿದ ಬಗ್ಗೆ ಗೊತ್ತಿರುವುದಿಲ್ಲ. ಖರೀದಿಯಾದ ನಂತರ 3 ನೇ ಪ್ರತಿವಾದಿಯ ಹೆಸರು ನಗರಸಭೆಗಳಲ್ಲಿ ದಾಖಲಾಗಿರುತ್ತದೆ ಅಂದರೆ ಇರುತ್ತದೆ. ದಾವಾಶೆಡ್ಯೂಲ್-1 ನೇ ಆಸ್ತಿ 3 ನೇ ಪ್ರತಿವಾದಿಯವರ ಕಬ್ಜೆಯಲ್ಲಿ ಇರುತ್ತದೆ ಅಂದರೆ ಸರಿಯಲ್ಲ, ನಮ್ಮ ಕಬ್ಜೆಯಲ್ಲಿ ಇರುತ್ತದೆ. ನಿಮ್ಮ ಕಬ್ಜೆಯಲ್ಲಿ ಇರುತ್ತದೆ ಅಂತಾ ತೋರಿಸಲು ಯಾವ ದಾಖಲೆಯನ್ನು ಹಾಜರಪಡಿಸಿರುತ್ತೀರಿ ಅಂದರೆ, ಕಾಗದ ಪತ್ರಗಳನ್ನು ಹಾಜರಪಡಿಸಿರುತ್ತೇನೆ. ಯಾವ ದಾಖಲೆ ಅಂದರೆ ದಾಖಲೆ ಇರುವುದಿಲ್ಲ. 2019 ರಲ್ಲಿ 1 ನೇ ಆಸ್ತಿ ಖರೀದಿ ಪತ್ರ ಆದ ನಂತರ 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಅಂದರೆ ಗೊತ್ತಿರುವುದಿಲ್ಲ. 2019 ರಿಂದ ಇಲ್ಲಿಯವರೆಗೆ ನಗರಸಭೆಯ ಕಂದಾಯವನ್ನು 3 ನೇ ಪ್ರತಿವಾದಿ ತುಂಬಿಕೊಂಡು ಬಂದಿರುತ್ತಾರೆ ಅಂದರೆ ನಾವೇ ತುಂಬಿದ್ದೇವೆ. ನೀವು ಕಂದಾಯವನ್ನು ತುಂಬಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಅಂದರೆ ಇಲ್ಲಾ. ಕಂದಾಯ ತುಂಬಿದ ಬಗ್ಗೆ ದಾಖಲೆಯನ್ನು ಹಾಜರಪಡಿಸಲು ಏನಾದರೂ ತೊಂದರೆ ಇದೆಯಾ ಅಂದರೆ ತೊಂದರೆ ಇರುವುದಿಲ್ಲ. 2019 ರಿಂದ ಇಲ್ಲಿಯವರೆಗೂ ನೀವು ನಗರಸಭೆಗೆ ಯಾವುದೇ ಕಂದಾಯವನ್ನು ದಾವಾ ಶೆಡ್ಯೂಲ್-1 ರ ಆಸ್ತಿಗೆ ತುಂಬಿರುವುದಿಲ್ಲ ಅಂದರೆ ನಾವು ಕಂದಾಯ ತುಂಬಲು ಹೋಗಿದ್ದು, ತುಂಬಿಕೊಂಡಿರುವುದಿಲ್ಲ. ಈ ದಿನದವರೆಗೂ 3 ನೇ ಪ್ರತಿವಾದಿ ಕಬ್ಜೆಯಲ್ಲಿದ್ದು ಅದನ್ನು ಕೋಟ್ರೇಶ ಬೋಳಿಕಟ್ಟೆಯವರಿಗೆ ಬಾಡಿಗೆ ಕೊಟ್ಟಿರುತ್ತಾರೆ ಅಂದರೆ ಭಾಡಿಗೆ ಕೊಟ್ಟಿರುವುದಿಲ್ಲ. ದಾವಾ ಶೆಡ್ಯೂಲ್-1 ಎ ಆಸ್ತಿಯಲ್ಲಿ ನೀವು ಕಬ್ಜೆಯಲ್ಲಿ ಇಲ್ಲದೇ ಇದ್ದರೂ ಕೂಡಾ

ಕಬ್ಜೆಯಲ್ಲಿರುತ್ತೇನೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮನೆತನದ ಸಾಲ ತೀರಿಸುವ ಸಲುವಾಗಿ ದಾವಾ ಶೆಡ್ಯೂಲ್-1 ಎ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಅಂದರೆ ಇಲ್ಲಾ. ಮೋಸದಿಂದ ಕ್ರಯಪತ್ರ ಬರೆದುಕೊಂಡ ಬಗ್ಗೆ ಬೇರೆ ಕಡೆ ಕ್ರಮ ತೆಗೆದುಕೊಂಡಿದ್ದೀರಾ ಅಂದರೆ ಇಲ್ಲಾ. ಶಿವಾ ಕೋ-ಆಪರೇಟಿವ್ ಕ್ರೇಡಿಟ್ ಸೊಸೈಟಿಯಲ್ಲಿ ನಿಮ್ಮ ಆಸ್ತಿಯನ್ನು ಒತ್ತೆ ಇಟ್ಟು ಸಾಲ ಪಡೆದುಕೊಂಡಿರುತ್ತೀರಿ ಅಂದರೆ ಹೌದು. ಅದರ ಮೇಲೆ ವಸೂಲಾತಿ ಕ್ರಮ ಜರುಗಿಸಿರುತ್ತಾರೆ ಅಂದರೆ ಹೌದು. ಆ ಸಾಲಕ್ಕೆ ನಿಮ್ಮ ಅಳಿಯ ಚನ್ನಬಸಪ್ಪ ಇವರು ಜಾಮೀನುದಾರರು ಅಂದರೆ ಹೌದು. ಚನ್ನಬಸಪ್ಪನ ಮೇಲೆ ಅರ್ಬನ ಕೋ-ಅಪರೇಟಿವ್ ಬ್ಯಾಂಕ್ ಸೊಸೈಟಿಯವರು ಸಾಲ ವಸೂಲಾತಿಗಾಗಿ ಅಮಲುಜಾರಿ ಪ್ರಕರಣ ದಾಖಲು ಮಾಡಿರುತ್ತಾರೆ ಅಂದರೆ ಹೌದು. ನಿಮ್ಮ ಮನೆತನದ ಅಭಿವೃದ್ಧಿಗೋಸ್ಕರ ಸಾಲ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ಭೂಮಿ ಅಭಿವೃದ್ಧಿ ಮಾಡುವುದಕ್ಕೋಸ್ಕರ ಸಾಲ ಪಡೆದಿದ್ದು, ಅದನ್ನು ತೀರಿಸುವ ಸಲುವಾಗಿ ಚನ್ನಬಸಪ್ಪ ದಾವಾ ಶೆಡ್ಯೂಲ್-1 ನ್ನು ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯವರು ದಾವೆ ಮಾಡಲು ಬರುವುದಿಲ್ಲ ಎಂಬ ಉದ್ದೇಶದಿಂದ ನಿಮ್ಮ ಮೂಲಕ ಅಲ್ಪವಯಿ ಸಂರಕ್ಷಣದಾರರ ಪರವಾಗಿ ನಿಮ್ಮನ್ನು ಆಯ್ಕೆ ಮಾಡಿ ಈ ದಾವೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. 1 ರಿಂದ 3 ನೇ ವಾದಿಯರು ಅಲ್ಪವಯಿ ಯಾಗಿದ್ದರಿಂದ, ನಿಮ್ಮನ್ನು ಸಂರಕ್ಷಣಾದಾರರನಾನಗಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿಯಿಂದ ಆಸ್ತಿ ಕಬಳಿಸಬೇಕೆಂಬ ಉದ್ದೇಶದಿಂದ 1 ಮತ್ತು 2 ನೇ ಪ್ರತಿವಾದಿಯವರು ಸೇರಿಕೊಂಡು ನಿಮ್ಮ ಮೂಲಕ ಈ ದಾವೆ ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ. ಈಗಲೂ ಕೂಡಾ 1 ಮತ್ತು 2 ನೇ ಪ್ರತಿವಾದಿಯವರೊಂದಿಗೆ ಉತ್ತಮ ಬಾಂದವ್ಯ ಹೊಂದಿರುತ್ತೀರಿ ಅಂದರೆ ಸರಿಯಲ್ಲ. ಅಸಲು ಅರ್ಜಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ

ಸಂಗತಿಗಳು ಸುಳ್ಳು ಇರುತ್ತವೆ ಅಂದರೆ ಸರಿಯಲ್ಲ. ಸಾಕ್ಷಿ ಹೇಳಲು ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಕೂಡಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 6-11-2024**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.